**ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹುಣಸೂರು**

**ಸಿ.ಸಿ.639/2019**

**ಸಿ.ಡಬ್ಲ್ಯೂ-2, ಪಿ.ಡಬ್ಲ್ಯೂ-5**

**ದಿಃ 10.02.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

| | |
|---|---|
| **ಸಾಕ್ಷಿಯ ಹೆಸರು** | **ದೊಡ್ಡಯ್ಯ ಕೆ ಎಸ್** |
| **ತಂದೆ/ಗಂಡನ ಹೆಸರು** | **ಲೇಟ್ ಸಣ್ಣಯ್ಯ** |
| **ವಯಸ್ಸು** | 47 **ವರ್ಷ** |
| **ಕೆಲಸ** | ಮುಖ್ಯಪೇದೆ |
| **ವಾಸಸ್ಥಳ** | ನಂಜನಗೂಡು |

**ಮುಖ್ಯ ವಿಚಾರಣೆ ಮಾನ್ಯ ಎ.ಪಿ.ಪಿ.ಯವರಿಂದ**

ನಾನು 14.11.2014 ರಿಂದ ಡಿಸೆಂಬರ್ 2019 ರವರೆಗೆ ಬಿಳಿಕೆರೆ ಪೋಲೀಸ್ ಠಾಣೆಯಲ್ಲಿ ಪೇದೆಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿ09.04.2015 ರಂದು ನನ್ನನ್ನು ಚಾಸಾ1 ರವರ ಜೊತೆ ರಾತ್ರಿ ಗಸ್ತು ಕರ್ತವ್ಯಕ್ಕೆ ನೇಮಕವಾಗಿದ್ದು, ತದನಂತರ ರಾತ್ರಿ 10.30 ಗಂಟೆಯ ಸಮಯದಲ್ಲಿ ಠಾಣೆಯಿಂದ ಗಸ್ತು ಕರ್ತವ್ಯಕ್ಕೆ ಹೊರಟಿದ್ದು, ಬಿಳಿಕೆರೆ ಟೌನ್ ಕಡೆ ಗಸ್ತು ಮಾಡಿಕೊಂಡು ರಾತ್ರಿ 1.50 ಗಂಟೆ ಸಮಯದಲ್ಲಿ ಬಿಳಿಕೆರೆ ಟೌನ್ ನ ಸಂತೆಮಾಳದ ವಿ.ಎಸ್.ಎಸ್.ಎನ್ ಬ್ಯಾಂಕಿನ ಬಳಿ ಗಸ್ತು ಮಾಡುತ್ತಿದ್ದಾಗ, ಬ್ಯಾಂಕ್ ನ ಬಳಿ ಒಂದು ಗಲ್ಲಿಯಲ್ಲಿ ಒಬ್ಬ ಆಸಾಮಿಯು ತನ್ನ ಕೈಯಲ್ಲಿ ಕೈಯಲ್ಲಿ ಒಂದು ಆಯುಧವನ್ನು ಹಿಡಿದುಕೊಂಡು ನಮ್ಮನ್ನು ನೋಡಿ ತನ್ನ ಇರುವಿಕೆಯನ್ನು ಮರೆಮಾಚಿಕೊಂಡು ನಾವು ಹತ್ತಿರ ಹೋಗುತ್ತಿದ್ದಾಗ ನಮ್ಮಿಂದ ತಪ್ಪಿಸಿಕೊಳ್ಳಲು ಓಡಿಹೋಗಲು ಪ್ರಯತ್ನಿಸಿದಾಗ. ಆತನನ್ನು ನಾನು ಮತ್ತು ಚಾಸಾ-1 ರವರು ಹಿಡಿದು ವಿಚಾರಸಲಾಗಿ ಆರೋಪಿಯು ತೊದಲಿಸುತ್ತಾ, ಒಂದು ಸಾರಿ ಮನು, ಮತ್ತೊಂದು ಸಾರಿ ಮಂಜು ಎಂದು ಉತ್ತರಿಸಿದನು. ನಂತರ ಅವನ ವಿಳಾಸವನ್ನು ವಿಚಾರಿಸಲಾಗಿ ಒಂದು ಬಾರಿ ಮೈಸೂರು, ಮತ್ತೊಂದು ಬಾರಿ ಕೆ.ಆರ್. ನಗರ ಎಂದು ಉತ್ತರಿಸಿರುತ್ತಾನೆ. ಮತ್ತೊಂದು ಬಾರಿ ಅವನ ಸರಿಯಾದ ವಿಳಾಸವನ್ನು

ವಿಚಾರಸಲಾಗಿ ಮಹೇಶ ಬಿನ್ ಲೇಟ್ ನಾರಾಯಣಗೌಡ, 30 ವರ್ಷ, ಒಕ್ಕಲಿಗ ಗೌಡ, ಹುಣಸೂರು ತಾಲ್ಲೂಕು ಎಂದು ತಿಳಿಸಿರುತ್ತಾನೆ. ಆತನು ಕೈಯಲ್ಲಿ ರಾಡನ್ನು ಹಿಡಿದುಕೊಂಡು ಬ್ಯಾಂಕ್ ನ ಬಳಿ ಕಳ್ಳತನ ಮಾಡಲು ಹೊಂಚು ಹಾಕುತ್ತಿದ್ದನು ಎಂದು ಖಾತರಿಪಡಿಸಿಕೊಂಡು, ಆತನನ್ನು ಮುಂದಿನ ಕ್ರಮಕ್ಕಾಗಿ ಆಯುಧ ಸಮೇತ ಜೊತೆಯಲ್ಲಿಯೇ ಠಾಣೆಗೆ 2.20 ಸಮಯಕ್ಕೆ ಕರೆದುಕೊಂಡು ಚಾಸಾ-1 ರವರು ಮುಂದಿನ ಕ್ರಮಕ್ಕಾಗಿ ವರದಿ ನೀಡಿರುತ್ತಾರೆ. ಸಾಕ್ಷಿ ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಗುರುತಿಸುತ್ತಾರೆ. ಸಾಕ್ಷಿ ನ್ಯಾಯಾಲಯದ ಮುಂದಿರುವ ಮು ಮಾ 1 ನ್ನು ನೋಡಿ ಗುರುತಿಸಿದ್ದಾರೆ. ನಾನು ಈ ಬಗ್ಗೆ ಮೇಲಾಧಿಕಾರಿಗೆ ಹೇಳಿಕೆ ನೀಡಿರುತ್ತೇನೆ.

**ಪಾಟೀಸವಾಲು ಆರೋಪಿ ಪರ ಶ್ರೀ ಪಿ.ವಿ ವಕೀಲರಿಂದಃ**

ಬಿಳಿಕೆರೆ ಠಾಣೆಯಿಂದ ಬ್ಯಾಂಕ್ ½ ಕಿ ಮೀ ದೂರದಲ್ಲಿದೆ ಎಂದರೆ ಸರಿ. ನಡೆದುಕೊಂಡು ಹೋದರೆ ಸುಮಾರು 5-6 ನಿಮಿಷ ಗಾಡಿಯಲ್ಲಿ ಹೋದರೆ ಸುಮಾರು 3 ನಿಮಿಷಕ್ಕೆ ತಲುಪುತ್ತೀರಿ ಎಂದರೆ ಸರಿ. ದಿನಚರಿಯ ರಿಜಿಸ್ಟರನಲ್ಲಿ ಗಸ್ತು ಹೋಗುವಾಗ ಮತ್ತು ಹಿಂದುರುಗಿರುವ ಸಮಯ ಮತ್ತು ಮಾರ್ಗದ ಬಗ್ಗೆ ನಮೂದು ಮಾಡಿರುತ್ತೇವೆಂದರೆ ಸರಿ. ಸದರಿ ಬೆಗ್ಗೆ ಅಂತಿಮ ವರದಿಯಲ್ಲಿ ಸಲ್ಲಿಸಿರುವುದಿಲ್ಲ ಎಂದರೆ ಸರಿ. ಘಟನಾ ಸ್ಥಳಕ್ಕೆ ಠಾಣೆಯಿಂದ ಯಾವಾ ಮಾರ್ಗವಾಗಿ ಹೋಗಿರುತ್ತೀರಿ ಎಂದರೆ ಸಾಕ್ಷಿ ಠಾಣೆಯಿಂದ ಬೈಪಾಸ್ ಮಾರ್ಗವಾಗಿ ಹೋಗಿರುತ್ತೇವೆ ಎಂದು ನುಡಿಯುತ್ತಾರೆ. ನೀವು ಹೋಗಿರುವ ಮಾರ್ಗದಲ್ಲಿ ಬಸ್ ನಿಲ್ದಾಣ, ಮತ್ತು ಕಾಲೇಜುಗಳು ಇದ್ದು, ಕೆಪಿಟಿಸಿಎಲ್ ಕಛೇರಿಗಳು ಇದ್ದು ರಾತ್ರಿ ಸಮಯದಲ್ಲಿ ವಾಚ ಮೆನ್ ಗಳು ಇರುತ್ತಾರೆಂದರೆ ಸರಿ. ವಿಎಸ್.ಎಸ್.ಎನ್ ಬ್ಯಾಂಕನಲ್ಲೂ ಸಹ ವಾಚಮೆನ್ ಇದ್ದರು ಎಂದರೆ ಸರಿಯಲ್ಲ. ಘಟನಾ ಸ್ಥಳದ ಎದುರುಗಡೆ ವಾಸದ ಮನೆ ಮತ್ತು ಮಳಿಗೆಗಳು ಇದೆ ಎಂದರೆ ಸರಿ. ಘಟನಾ ಸ್ಧಳದಲ್ಲಿ 10 ನಿಮಿಷಕ್ಕೆ ಒಮ್ಮೆ ಸಾರ್ವಜನಿಕರು ವಾಹನಗಳನ್ನು ಚಲಾಯಿಸುತ್ತಿದ್ದರು ಎಂದರೆ ಸರಿಯಲ್ಲ. ಮುಖ್ಯ ರಸ್ತೆಯಾದ ಬಜಾರ್ ರಸ್ತೆಯಲ್ಲಿ ಸಿ.ಸಿ. ಕ್ಯಾಮಾರಗಳನ್ನು ಅಳವಡಿಸಿರುತ್ತಾರೆಂದರೆ ಸರಿ. ದಾಳಿ ಆದ ನಂತರ ಠಾಣಾಗೆ ಹಿಂದುರುಗುವಾಗ ಸದರಿ ಬಜಾರ್ ರಸ್ತೆಯಲ್ಲಿ ಹಿಂದುರುಗಿರುತ್ರಾರೆಂದರೆ ಸಾಕ್ಷಿ ಕೆ.ಎಸ್. ಆರ್.ಟಿ.ಸಿ. ಬಸ್ ನಿಲ್ದಾಣನಿಂದ ಬಂದಿರುತ್ತೀರಿ ಎಂದರೆ ಸರಿ. ಕೆ.ಎಸ್.ಆರ್.ಟಿ.ಸಿ ಬಸ್ ನಿಲ್ದಾಣದಲ್ಲೂ ಸಹ ಕ್ಯಾಮರಗಳನ್ನು ಅಳವಡಿಸಿರುತ್ತಾರೆಂದರೆ ಸರಿ. ಘಟನಾ ಸ್ಥಳದಲ್ಲಿರುವ ವಾಸದ ಜನರನ್ನು ಎಬ್ಬಿಸಿ

ಆರೋಪಿಯನ್ನು ಗಸ್ತು ಮಾಡಲು ಯಾವುದಾದರೂ ತೊಂದರೆ ಇತ್ತಾ ಎಂದರೆ ಇರಲಿಲ್ಲ ಎಂದು ನುಡಿಯುತ್ತಾರೆ. ಘಟನಾ ಸ್ಥಳದ ಹತ್ತಿರ ಕಾಲೇಜು ಮತ್ತು ಕೆಪಿಟಿಎಸಪಿಎಲ್ ಕಛೇರಿ ಇದ್ದು ಸದರಿ ವಾಚ್ ಮೆನ್ ಗಳ ಸಮಕ್ಷಮ ಗಸ್ತು ಮಾಡಲು ತೊಂದರೆ ಇತ್ತಾ ಎಂದರೆ ಸಾಕ್ಷಿ ಅವರಿಗೆ ನಾವು ತಿಳಿಸಿರುವುದಿಲ್ಲ ಎಂದು ನುಡಿಯುತ್ತಾರೆ. ಘಟನಾ ಸ್ಥಳದ ಹತ್ತಿರ ಇದ್ದಂತಹ ಸಿ.ಸಿ. ಟಿವಿ ಗಸ್ತು ಮಾಡಿರುವ ಫೂಟೇಜ್ ಗಳನ್ನು ಈ ಪ್ರಕರಣದಲ್ಲಿ ಅಳವಡಿಸಿರುವುದಿಲ್ಲ ಎಂದರೆ ಸರಿ. ದಸ್ತಗಿರಿ ಮಾಡಿ ಆರೋಪಿಯನ್ನು ಕರೆದುಕೊಂಡು ಬರುವ ಸಮಯದಲ್ಲಿ ಬೇರೆ ಯಾರೂ ಇರಲಿಲ್ಲ.

ಆರೋಪಿಯದ್ದು ಮೂಲ ಕಸಬಾ ಹೋಬಳಿ, ರಾಯನಹಳ್ಳಿ ಎಂದರೆ ಸರಿ. ಸದರಿ ಗ್ರಾಮದಲ್ಲಿ ಆರೋಪಿ ಒಂದು ಹುಡುಗಿಯನ್ನು ಪ್ರೀತಿಸಿದ್ದು, ಸದರಿ ಸಂಬಂಧ ಹುಣಸೂರು ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ದೂರು ಇರುತ್ತದೆಂದರೆ ನನಗೆ ಗೊತ್ತಿಲ್ಲ, ಸದರಿ ವಿಚಾರವಾಗಿ ಆರೋಪಿ ಅನುಮಾನಸ್ಥದವಾಗಿ ಆಯುಧವನ್ನು ಹಿಡಿದುಕೊಂಡು ಓಡಾಡುತ್ತಿರಲಿಲ್ಲ ಆದರೂ ಸಹ ನಮ್ಮ ಠಾಣೆಯ ಅಂಕಿ ಅಂಶಗಳಿಗೊಸ್ಕರ ಅವನ ವಿರುದ್ದ ಗಸ್ತು ಮಾಡಿರುತ್ತೇವೆಂದು ದೂರನ್ನು ನೀಡಿರುತ್ತೇನೆಂದರೆ ಸರಿಯಲ್ಲ. ಅಮಾನತ್ತು ಪಂಚನಾಮೆ ಮಾಡುವ ಮು.ಮಾ-1 ವಶಪಡಿಸಿಕೊಂಡಿರುವುದಿಲ್ಲ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಆರೋಪಿ ಯಾವುದೇ ತಪ್ಪನ್ನು ಮಾಡದಿದ್ದರು, ಈ ಸುಳ್ಳು ದೂರನ್ನು ನೀಡಿರುತ್ತೇನೆಂದರೆ ಸರಿಯಲ್ಲ. ಆರೋಪಿಯನ್ನು ನೀವು ದಸ್ತಗಿರಿ ಮಾಡಿಲ್ಲ ಹಾಗೂ ಮು ಮಾ 1 ನ್ನು ಅಮಾನತ್ತುಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ.

ಓ ಹೇ ಕೇ ಸರಿ ಇದೆ.

ಒಂದನೇ ಅಪರ ಸಿವಿಲ್ ಜಡ್ಜ್ ಮತ್ತು
ಜೆ.ಎಂ.ಎಫ್.ಸಿ, ಹುಣಸೂರು